ಸುರಿಯಲು ಭಾವೇಶ್ ಬಯಸಿದ್ದರು.

ದಿನಗಳುರುಳಿ, ವಾರವಾಗಿ, ತಿಂಗಳುಗಳು ಜಾರಿ ಈಗ ವರ್ಷದ ಮೇಲಾಗಿತ್ತು. ಇದೀಗ ನೀತಾ ಗರ್ಭವತಿಯಾದರು. ಭಾವೇಶ್ ಅವರ ಖುಷಿಗೆ ಪಾರವಿರಲಿಲ್ಲ. ನೀತಾ ಅವರ ತಂದೆ ತಾಯಿಯರು ಇವರ ಎಲ್ಲ ಮಾತುಗಳನ್ನೂ ಒಪ್ಪಿದ್ದರು. ಆದರೆ ಅವರು ನೀತಾ ಅವರ ಪ್ರಸವ ಮುಂಬಯಿಯಲ್ಲಿ ಆಗಬೇಕೆಂದು ಕೇಳಿಕೊಂಡರು. ಕೊನೆಯ ಮೂರ್ನಾಲ್ಕು ತಿಂಗಳು ಮುಂಬಯಿಗೆ ಹೋಗುವುದೇ ಒಳ್ಳೆಯದಿತ್ತು. ಮಹಾಬಲೇಶ್ವರದಲ್ಲಿ ಅಷ್ಟು ಒಳ್ಳೆಯ ಆಸ್ಪತ್ರೆಗಳು ಇರಲಿಲ್ಲ.

ದಿನಾಂಕ 18 ನವೆಂಬರ್ 1998ರ ಸಂಜೆ ನೀತಾಗೆ ಭಾವೇಶ್ ಫೋನ್ ಮಾಡಿದರು. ಆಕೆ ತಾರಸಿಯ ಮೇಲೆ ನಡೆದಾಡುತ್ತಿದ್ದರು. ಭಾವೇಶ್ ನಿಶ್ಚಿಂತೆಯಿಂದ ಮಲಗಿದರು. ಬೆಳಗ್ಗೆ ನಾಲ್ಕು ಗಂಟೆಗೆ ಫೋನ್ ಬಂದಾಗ ಭಾವೇಶ್ ಝಗ್ಗನೆದ್ದು ಕುಳಿತರು. ಅತ್ತ ಕಡೆಯಿಂದ ನೀತಾ ಅವರ ತಾಯಿ, ಮಗುವಿನ ಆಗಮನದ ಶುಭ ಸಮಾಚಾರವನ್ನು ನೀಡಿದರು. ಕುಣಾಲ್ ಜನಿಸಿದ್ದ. ಭಾವೇಶ್ ಖುಷಿಯಿಂದ 'ಅಮ್ಮ, ಅಜ್ಜಿಯಾದ ನಿಮಗೂ ಅಭಿನಂದನೆ' ಎಂದು ಶುಭ ಕೋರಿದರು.

ಬೆಳಗು ಕಣ್ಬಿಡುವುದನ್ನೇ ಕಾದು, ಮುಂಜಾನೆಯ ಮೊದಲ ಬಸ್ ಹಿಡಿದು ಮುಂಬಯಿಗೆ ಓಡಿದರು. ಬೋರಿವಲಿಯ ಹಿಂಡ್ಲೇಕರ್ ಆಸ್ಪತ್ರೆ ತಲುಪಿದರು. ನಾರ್ಮಲ್ ಪ್ರಸವವಾಗಿದ್ದು ನೀತಾ ಮತ್ತು ಮಗು ಕುಣಾಲ್ ಸ್ವಸ್ಥವಾಗಿದ್ದರು. ಕುಣಾಲ್‌ನನ್ನು ಎತ್ತಿಕೊಳ್ಳಲು ಭಾವೇಶ್ ಅವರ ಮಡಿಲಿಗೆ ಕೊಟ್ಟಾಗ, ಈ ಪ್ರಪಂಚದಲ್ಲಿಯೇ ಅತ್ಯಂತ ಅದೃಷ್ಟವಂತ ತಾನೆಂದು ಭಾವೇಶ್‌ಗೆ ಭಾಸವಾಯಿತು. ಸ್ವಸ್ಥ ಮಗು ತಮ್ಮ ಮನೆಯಲ್ಲಿ ಜನ್ಮ ತಳೆದಿತ್ತು. ಅದಕ್ಕಿಂತ ಮಿಗಿಲಾದ ಖುಷಿ ಭಾವೇಶ್ ಅವರಿಗೆ ಬೇರೆ ಇರಲಿಲ್ಲ. ತನ್ನಂತೆ ಮಗು ಅಂಧನೋ, ಅಪಂಗನೋ ಆಗಿ ಹುಟ್ಟುವ ಭೀತಿ ಭಾವೇಶ್ ಅವರನ್ನು ಈ ಒಂಬತ್ತು ತಿಂಗಳೂ ಕಾಡಿತ್ತು. ಕುಣಾಲ್ ಅನ್ನು ನೋಡಿದ ಬಹಳ ಪ್ರಸಿದ್ಧ ವೈದ್ಯರಾದ ಡಾ. ಹಿಂಡ್ಲೇಕರ್, 'ಮಗುವಿನಲ್ಲಿ ಅಂಧತ್ವವಾಗಲೀ, ಇನ್ನಾವುದೇ ಅಂಗವಿಕಲತೆಯಾಗಲೀ ಇಲ್ಲ. ಮಗು ಸ್ವಸ್ಥವಾಗಿದೆ' ಎಂದು ಹೇಳಿದ್ದರು.

ಮೂರನೇ ತಿಂಗಳು, ವಸಂತ ಪಂಚಮಿಯ ದಿನ ನೀತಾ ಮತ್ತು ಮಗು ಕುಣಾಲನನ್ನು ಕರೆ ತರಲು ಭಾವೇಶ್ ಮುಂಬಯಿಗೆ ಹೊರಟರು. ವಸಂತ ಪಂಚಮಿಯ ದಿನವೇ ಭಾವೇಶ್ ಅವರ ತಂದೆಯ ಜನ್ಮವಾಗಿತ್ತು. ಅವರ ತಂದೆ ಮತ್ತು ತಾಯಿಯ ವಿವಾಹದ ದಿನ ಕೂಡಾ ಅದಾಗಿತ್ತು. ಜೊತೆಗೆ ನೀತಾ ಮತ್ತು ಭಾವೇಶ್ ಅವರ ನಿಶ್ಚಿತಾರ್ಥದ ದಿನವೂ ಅದೇ ಆಗಿತ್ತು. ನೀತಾ ಅದೇ ದಿನ ಮಹಾಬಲೇಶ್ವರಕ್ಕೆ ಹಿಂತಿರುಗಲು ಬಯಸಿದರು. ಇದರ ನಡುವೆ ಈ ಮೂರು ತಿಂಗಳಲ್ಲಿ ತಂದೆ, ಮೂರು ಬಾರಿ ಹೋಗಿ ನೀತಾ ಮತ್ತು ಮಗುವನ್ನು ನೋಡಿ ಬಂದಿದ್ದರು. ಸೊಸೆ ಮತ್ತು ಮೊಮ್ಮಗು ಬೇಗನೆ ಮನೆಗೆ ಬರಲಿ ಎಂದು ಉತ್ಸುಕತೆಯಿಂದ ಕಾದಿದ್ದರು. ಈ ಎಲ್ಲ ಹೊಸ ಜವಾಬ್ದಾರಿಗಳೊಂದಿಗೆ ಭಾವೇಶ್ ಮತ್ತು ನೀತಾ ಬದುಕಿನ ಹೊಸದೊಂದು ಸುಂದರ ಅಧ್ಯಾಯಕ್ಕೆ ಕಾಲಿಟ್ಟಿದ್ದರು.

ಈಗ ನೀತಾ ಪೂರ್ತಿಯಾಗಿ ಮಗುವಿನ ಆರೈಕೆಯಲ್ಲಿ ತೊಡಗಿದ್ದರು. ಹಾಗಾಗಿ ಆ ದಿನಗಳಲ್ಲಿ ಗೆಳೆಯ ಭರತ್ ಮತ್ತು ಇರ್ಫಾನ್ ಸ್ಟಾಲ್ ನಡೆಸುವುದರಲ್ಲಿ ಸಹಾಯ ಮಾಡಿದರು. ಎಲ್ಲ ಕೆಲಸವೂ ಯೋಜಿಸಿದಂತೆ ನಡೆಯುತ್ತಿತ್ತು, ನೀತಾ ಅವರ ಬೆಂಬಲ ಇದ್ದೇ ಇತ್ತು. ಜವಾಬ್ದಾರಿಗಳು ಬಹಳಷ್ಟು ಹೆಚ್ಚಿದ್ದವು. ಆದರೆ ಭಾವೇಶ್ ಅವರು ಬಹಳ ಸಂತುಷ್ಟರಿದ್ದರು, ಹಿಗ್ಗಿನಿಂದ ಉಬ್ಬಿಹೋಗಿದ್ದರು. ಈಗ ಹೊಸ ಹೊಸ ಕನಸುಗಳು ಅವರ ಕಣ್ಣು ತುಂಬಿದ್ದವು. ಕುಣಾಲನನ್ನು ದೊಡ್ಡವನಾಗಿಸಬೇಕು, ಆತನನ್ನು ಓದಿಸಬೇಕು ಮತ್ತು ಒಳ್ಳೆಯ ಮನುಷ್ಯನಾಗಿ ಬೆಳೆಸಬೇಕು. ಮಗು ಸ್ವಲ್ಪ ದೊಡ್ಡದಾದಾಗ ಮಾವನವರ ಹತ್ತಿರ ಬಿಟ್ಟು, ನೀತಾ ಸ್ಟಾಲ್‌ಗೆ ಬರತೊಡಗಿದರು. ಇದೀಗ ಕುಣಾಲನ ಜೊತೆಗೇ ಅವರ ಉದ್ಯಮವೂ ಬೆಳೆಯತೊಡಗಿತ್ತು.

ನೀತಾ ಮೋಂಬತ್ತಿ ತಯಾರಿಕೆಯಲ್ಲಿ ಭಾವೇಶ್ ಅವರಿಗೆ ಅಷ್ಟೇನೂ ಸಹಾಯ ಮಾಡಲು ಸಾಧ್ಯವಿರಲಿಲ್ಲ. ಅದು ಪೂರಾ ಭಾವೇಶ್ ಅವರ ವಿಭಾಗವಾಗಿತ್ತು. ಆದರೆ ಆಕೆ ಮಾರ್ಕೆಟ್‌ಗೆ ಬರುತ್ತಿದ್ದ ಹೊಸ ಹೊಸ ಮೋಂಬತ್ತಿಗಳ ವಿನ್ಯಾಸಗಳ ಬಗ್ಗೆ ತಿಳಿಸುವರು. ಪುಣೆ ಮತ್ತು ಮುಂಬಯಿಗೆ ಹೋಗುವ ಅವಕಾಶ ಸಿಕ್ಕಾಗಲೆಲ್ಲ, ಅಲ್ಲಿ ದೊಡ್ಡ ದೊಡ್ಡ ಮಾಲ್‌ಗಳಿಗೆ ಭಾವೇಶ್ ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಮೋಂಬತ್ತಿಗಳ ವಿಭಾಗ ಎಲ್ಲಿದೆ ಎಂದು ಹುಡುಕುವರು. ವಿಶ್ವದ ಎಲ್ಲ ಕಡೆಯಿಂದ ಆಮದು ಮಾಡಿ ತಂದಿಟ್ಟ ಮೋಂಬತ್ತಿಗಳ ಅಂಗಡಿಗಳಿಗೆ ಹೋಗುತ್ತಿದ್ದರು. ಅವೆಲ್ಲವುಗಳನ್ನು ಭಾವೇಶ್ ಅವರು ಸ್ಪರ್ಶಿಸಿ ನೋಡುತ್ತಿದ್ದರು. ನೀತಾ ವಿವರಿಸಿ ಹೇಳುತ್ತಿದ್ದರು. ಸ್ಪರ್ಶ ಮತ್ತು ನೀತಾ ಅವರ ವಿವರಣೆ ಭಾವೇಶ್ ಅವರ ಮಿದುಳು ಹೊಸ ಬಗೆಯ ಮೋಂಬತ್ತಿಗಳನ್ನು ಅರಿಯಲು ಸಹಾಯಕವಾಗುತ್ತಿತ್ತು. ನೀತಾ ಪ್ರತಿಯೊಂದನ್ನೂ ಗಮನಿಸಿ ಭಾವೇಶ್ ಅವರಿಗೆ ಹೇಳುವರು. 'ನೋಡು ಈ ಮೋಂಬತ್ತಿಗಳ ಆಕಾರ ಮತ್ತು ಅವುಗಳನ್ನು ಪ್ಯಾಕ್ ಮಾಡಿರುವ ಬಗೆಯನ್ನು'. ಅವರ ಹತ್ತಿರ ಇದ್ದ ಹಣಕ್ಕೆ ಯಾವುದಾದರೂ ಕ್ಯಾಂಡಲ್ ಕೊಳ್ಳಬಹುದಿದ್ದರೆ, ಕೊಂಡೂ ಬರುವರು. ಹಿಂತಿರುಗಿ ಮಹಾಬಲೇಶ್ವರಕ್ಕೆ ಹೋದ ಮೇಲೆ ಅದರ ಬಗ್ಗೆ ಸಂಶೋಧನೆಗೆ ತೊಡಗುವರು.

ಅಷ್ಟೇ ಅಲ್ಲ, ನೀತಾ ಪತ್ರಿಕೆಗಳಲ್ಲಿ ಬರುವ ಮೋಂಬತ್ತಿಗಳನ್ನು ಕುರಿತ ಲೇಖನಗಳನ್ನು ಸಂಗ್ರಹಿಸುವರು. ಅವನ್ನು ಓದಿ ಭಾವೇಶ್ ಅವರಿಗೆ ಹೇಳುವರು. ಅದರಲ್ಲಿ ಪ್ರಕಟವಾದ ಮೋಂಬತ್ತಿಗಳ ಚಿತ್ರವನ್ನು ವಿವರಿಸಿ ತಿಳಿಸುವರು. ಈ ಮೋಂಬತ್ತಿಗಳ ಮಾರುಕಟ್ಟೆಯಲ್ಲಿ ತಮ್ಮ ಸ್ಥಾನವನ್ನು ಸ್ಥಾಪಿಸಬೇಕು ಎಂದರೆ, ತಮ್ಮ ಮೋಂಬತ್ತಿಗಳನ್ನು ಬೇಡಿಕೆಗೆ ತಕ್ಕಂತೆ ಹೊಸ ವಿನ್ಯಾಸಗಳಲ್ಲಿ ರೂಪಿಸಬೇಕಿತ್ತು, ಕಾಲಕ್ಕೆ ತಕ್ಕಂತೆ ಪ್ಯಾಕಿಂಗ್‌ನಲ್ಲಿಯೂ ಬದಲಾವಣೆ ತರಬೇಕಿತ್ತು. ನೀತಾ, ಭಾವೇಶ್ ತಯಾರಿಸಿದ ಮೋಂಬತ್ತಿಗಳ ಬಗ್ಗೆ ಎಂದೂ ಪೂರ್ಣ ರೂಪದಲ್ಲಿ ಸಂತುಷ್ಟರಿರಲಿಲ್ಲ. ಪ್ರತಿ ಬಾರಿ ನೀತಾ ಅವರು ತಯಾರಿಸಿದ ಮೋಂಬತ್ತಿಗಳಲ್ಲಿ ಏನಾದರೂ ಕುಂದು ಕೊರತೆಯನ್ನು ಹುಡುಕಿ, ಭಾವೇಶ್‌ಗೆ ಮತ್ತಷ್ಟು ಉತ್ತಮವಾಗಿ ಮೋಂಬತ್ತಿಗಳನ್ನು ತಯಾರಿಸಲು ಪ್ರೇರೇಪಿಸುವರು. ಭಾವೇಶ್ ತಮ್ಮ ಮೋಂಬತ್ತಿಗಳನ್ನು ಮತ್ತಷ್ಟು ಸುಧಾರಿಸಲು ತೊಡಗುವರು. ಭಾವೇಶ್ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಒಳ್ಳೆಯ ಮೋಂಬತ್ತಿ ತಯಾರಿಸುವುದರಲ್ಲಿ ಸಕ್ಷಮರಾಗಲಿ ಎಂಬುದು ನೀತಾ ಅವರ ಅಭಿಲಾಷೆಯಾಗಿತ್ತು. ನೀತಾರಿಗೆ ಭಾವೇಶ್ ಅವರಿಂದ ಹೆಚ್ಚಿನ ನಿರೀಕ್ಷೆಗಳಿದ್ದವು. ಸತತ ಪ್ರಯತ್ನದಲ್ಲಿ ಭಾವೇಶ್ ತಮ್ಮ ಮೋಂಬತ್ತಿಗಳ ಗುಣಮಟ್ಟವನ್ನು ಉತ್ತಮಗೊಳಿಸುತ್ತಿದ್ದರು, ಪ್ಯಾಕೇಜಿಂಗ್ ಆಕರ್ಷಕವಾಗಿ ತಯಾರಿಸುತ್ತಿದ್ದರು.

ನೀತಾ ಸನ್‌ರೈಸ್ ಕ್ಯಾಂಡಲ್ಸ್‌ನ ವ್ಯಾಪ್ತಿಯನ್ನು ಹೆಚ್ಚಿಸುವುದು ಹೇಗೆ ಎಂಬ ಯೋಚನೆಯಲ್ಲಿ, ಯೋಜನೆಯಲ್ಲಿ ಮುಳುಗುವರು. ಸ್ಟಾಲ್‌ನಲ್ಲಿ ಇರುವಾಗ, ದೂರ ದೂರದಿಂದ ಬಂದ ಪ್ರವಾಸಿಗರೊಡನೆ ಅವರ ಭೆಟ್ಟಿಯಾಗುತ್ತಿತ್ತು. ಅವರಲ್ಲಿ ಅನೇಕರು ಅನೇಕ ಸಂಸ್ಥೆ, ಸಂಘಟನೆಯ ಸದಸ್ಯರೂ ಆಗಿರುತ್ತಿದ್ದರು. ಅವರುಗಳು ಪಟ್ಟಣದಲ್ಲಿ ಆಗುವ ಪ್ರದರ್ಶನಗಳಲ್ಲಿ ಇವರು ಭಾಗಿಯಾಗಲಿ ಎಂದು ಇಚ್ಛಿಸುತ್ತಿದ್ದರು. ಇಂತಹ ಅವಕಾಶಗಳ ಮಹತ್ವವನ್ನು ಅರಿತ ಭಾವೇಶ್ ಮತ್ತು ನೀತಾ, ಅವರ ಆಮಂತ್ರಣವನ್ನು ತಕ್ಷಣ ಒಪ್ಪಿಕೊಳ್ಳುತ್ತಿದ್ದರು. ಸ್ವಂತ ಗಾಡಿ ಇರಲಿಲ್ಲ. ಬಾಡಿಗೆಯ ಟ್ಯಾಕ್ಸಿ ತೆಗೆದುಕೊಳ್ಳುವ ಆರ್ಥಿಕ ಕ್ಷಮತೆಯೂ ಇರಲಿಲ್ಲ.

ಇಂತಹ ಸಮಯದಲ್ಲಿ, ಮಹಾಬಲೇಶ್ವರದ ತಮ್ಮ 'ಮೇಜಿನ ಅಂಗಡಿ' ಮುಚ್ಚಿ, ರಟ್ಟಿನ ಪೆಟ್ಟಿಗೆಗಳಲ್ಲಿ ಮೋಂಬತ್ತಿಗಳನ್ನು ತುಂಬಿಕೊಂಡು, ರಾಜ್ಯ ಸಾರಿಗೆ ಬಸ್ಸಿನಲ್ಲಿಯೇ ಅತಿ ಕಡಿಮೆ ಖರ್ಚಿನಲ್ಲಿ ಪ್ರಯಾಣ ಮಾಡುವರು. ಕಂಡಕ್ಟರ್ ಮತ್ತು ಡ್ರೈವರ್ ಅನ್ನು 'ದಾದಾ, ಮಾಮಾ' ಎಂದು ಸಂಬೋಧಿಸುತ್ತಾ, ಎಲ್ಲಿಯಾ ದರೂ ಸೀಟಿನ ಕೆಳಗೆ, ಇಲ್ಲವೇ ಇಂಜಿನ್‌ನ ಬಳಿ ತಮ್ಮ ಪೆಟ್ಟಿಗೆಗಳನ್ನು ಇಡಲು ಪ್ರಯತ್ನಿಸುವರು. ಪ್ರತಿ ಪ್ರಯಾಣದ ಕಷ್ಟಗಳಲ್ಲಿ ನೀತಾ ಕುಸಿಯುತ್ತಿರಲಿಲ್ಲ. ಸದಾ ಭವಿಷ್ಯದತ್ತ ಮುಖ ಮಾಡಿ ಉತ್ಸಾಹದಿಂದ ಹೇಳುವರು: 'ನಮಗೆ ತುಂಬಾ ಕಷ್ಟವಾಗುತ್ತಿದೆ ನಿಜ, ಆದರೆ ಇದೆಲ್ಲ ಬದುಕಿನುದ್ದಕ್ಕೂ ಮಾಡುವ ಅನಿವಾರ್ಯ ನಮಗಿರುವುದಿಲ್ಲ. ನಮ್ಮ ಸನ್‌ರೈಸ್ ಕ್ಯಾಂಡಲ್ಸ್ ಅನ್ನು ಹೆಚ್ಚು ಜನರಿಗೆ ತಲುಪಿಸಬೇಕು ಎಂದರೆ ಕೆಲವು ವರ್ಷಗಳು ನಾವು ಬಹಳ ಶ್ರಮ ಹಾಕಲೇ ಬೇಕು. ನಾವು ಹಾಕುವ ಪರಿಶ್ರಮಕ್ಕೆ ಒಳ್ಳೆಯ ಪ್ರತಿಫಲವಿದೆ. ಪ್ರತಿ ಪ್ರದರ್ಶನ ನಮಗೆ ಏನಿಲ್ಲವೆಂದರೂ ಐದು ಸಾವಿರದಿಂದ ಹತ್ತು ಸಾವಿರದಷ್ಟು ಜನರೊಡನೆ ನಮ್ಮ ಸಂಪರ್ಕವನ್ನು ಕಲ್ಪಿಸುತ್ತದೆ'.

(ಸಶೇಷ)